# ಈ ಕನ್ನಡತಿ ಮೊದಲ ಗ್ರ್ಯಾಂಡ್‌ಮಾಸ್ಟರ್


ಇಶಾ ಶರ್ಮಾ

ಕರ್ನಾಟಕದಲ್ಲಿ ಪುರುಷರ ವಿಭಾಗದ ಚೆಸ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಗ್ರ್ಯಾಂಡ್‌ಮಾಸ್ಟರ್‌ಗಳು ಹೊರಹೊಮ್ಮಿದ್ದಾರೆ. ತೇಜಕುಮಾರ್ ಅವರು ಗ್ರ್ಯಾಂಡ್‌ಮಾಸ್ಟರ್ ಆದ ಕರ್ನಾಟಕದ ಮೊದಲ ಆಟಗಾರ ಎಂಬ ಹೆಗ್ಗಳಿಕೆ ಹೊಂದಿದ್ದಾರೆ.

ಇದುವರೆಗೆ ಮಹಿಳೆಯರ ವಿಭಾಗದಲ್ಲಿ ಗ್ರ್ಯಾಂಡ್‌ಮಾಸ್ಟರ್ ಯಾರಾಗುತ್ತಾರೆಂಬ ಪ್ರಶ್ನೆ ಇತ್ತು. ಇದೀಗ ಇಶಾ ಶರ್ಮಾ ಅವರು ಈ ಪ್ರಶ್ನೆಗೆ ಉತ್ತರವಾಗಿ ಹೊರಹೊಮ್ಮಿದ್ದಾರೆ.

ಸರ್ಬಿಯಾದ ಸುಬೊಟಿಚಾದಲ್ಲಿ ಈಚೆಗೆ ನಡೆದ ಐಎಂ ಸರ್ಕಿಟ್ ಟೂರ್ನಿಯಲ್ಲಿ ಅವರು ಮೂರನೇ ಡಬ್ಲ್ಯುಜಿಎಂ ನಾರ್ಮ್ ಪಡೆದರು. ಡಬ್ಲ್ಯುಜಿಎಂ ಗೌರವ ಪಡೆಯಲು ಆಟಗಾರ್ತಿಯೊಬ್ಬರು ಮೂರು ನಾರ್ಮ್‌ಗಳ ಜೊತೆ 2300 ಫಿಡೆ ರೇಟಿಂಗ್ ಗಳಿಸಬೇಕಾಗುತ್ತದೆ. ಅವರು 2022ರ ಆಗಸ್ಟ್‌ನಲ್ಲೇ ಈ ರೇಟಿಂಗ್ ಪೂರೈಸಿದ್ದರು. 2022ರಲ್ಲಿ ಸ್ಲೊವಾಕಿಯಾದಲ್ಲಿ ಅವರು ಮೊದಲ ನಾರ್ಮ್ ಪಡೆದಿದ್ದರು. ಮರುವರ್ಷ ಮೊರಾಕ್ಕೊದಲ್ಲಿ ಎರಡನೇ ನಾರ್ಮ್ ಗಳಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಜನಿಸಿದ ಇಶಾ, ಮೊದಲ ಟೂರ್ನಿ ಆಡಿದ್ದು 11ನೇ ವಯಸ್ಸಿನಲ್ಲಿ. ತಂದೆ ಶ್ರೀಹರಿ, ತಾಯಿ ವಿದ್ಯಾ ಅವರು ವೈದ್ಯರು. ಮಂಗಳೂರಿನಲ್ಲಿ ಆರಂಭವಾಗಿದ್ದ ಚೆಸ್ ಅಕಾಡೆಮಿಯಲ್ಲಿ ರಾಜ್ಯದ ಹಿರಿಯ ಆಟಗಾರರಾದ ಅರವಿಂದ ಶಾಸ್ತ್ರಿ, ಶಿವಾನಂದ ಮತ್ತು ರಾಘವೇಂದ್ರ ಅವರಿಂದ ಇಶಾ ತರಬೇತಿ ಪಡೆದರು.

‘ಜಿಎಂ ಆಗುವುದು ನನ್ನ ಕನಸಾಗಿತ್ತು. ಕಳೆದ ಐದು ವರ್ಷಗಳಿಂದ ನಾನು ಇದಕ್ಕಾಗಿ ಹಗಲಿರುಳು ಶ್ರಮಿಸಿದ್ದೇನೆ. ಈಗ ನನ್ನ ಮನಸ್ಸಿಗೆ ನೆಮ್ಮದಿ ದೊರೆತಿದೆ’ ಎಂದು ಇಶಾ ಸಂತಸ ವ್ಯಕ್ತಪಡಿಸುತ್ತಾರೆ.

19ನೇ ವಯಸ್ಸಿನಲ್ಲಿಯೇ ಐಎಂ (ಅಂತರರಾಷ್ಟ್ರೀಯ ಮಾಸ್ಟರ್) ಪಟ್ಟ ಗಳಿಸಿದ್ದರು. ಅಲ್ಲಿಂದ ಇಲ್ಲಿಯವರೆಗೆ ಅವರು ಜಿಎಂ ಆಗುವ ಹಾದಿಯಲ್ಲಿ ಕಠಿಣ ಸವಾಲುಗಳನ್ನು ಎದುರಿಸಿದ್ದರು. ವಿದೇಶಗಳಲ್ಲಿ ನಡೆಯುವ ಟೂರ್ನಿಗಳಲ್ಲಿ ಘಟಾನುಘಟಿ ಆಟಗಾರರ ಎದುರು ಗೆದ್ದು ಅಂಕಗಳನ್ನು ಸಂಪಾದಿಸಿದ್ದಾರೆ.

ಅವರು ಈಚೆಗೆ ಅಂತರರಾಷ್ಟ್ರೀಯ ಮಾಸ್ಟರ್ ಶರಣ್ ರಾವ್ ಅವರೊಂದಿಗೆ ಮದುವೆಯಾಗಿದ್ದಾರೆ. ದಂಪತಿಯು ಯುವಪ್ರತಿಭೆಗಳಿಗೆ ತರಬೇತಿ ನೀಡುವಲ್ಲಿ ನಿರತರಾಗಿದ್ದಾರೆ.

‘ಬಹಳಷ್ಟು ಪ್ರತಿಭಾವಂತರಿದ್ದಾರೆ. ಅವರಿಗೆ ಸೂಕ್ತ ಮಾರ್ಗದರ್ಶನ ಬೇಕು. ಆದ್ದರಿಂದ ನಾನು ಆಟಕ್ಕಿಂತ ಕೋಚಿಂಗ್ ವೃತ್ತಿಯಲ್ಲಿ ಹೆಚ್ಚು ತೊಡಗಿಕೊಳ್ಳುತ್ತಿದ್ದೇನೆ’ ಎಂದೂ ಇಶಾ ಹೇಳುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಪಕ್ಕದ ತಮಿಳುನಾಡಿನಲ್ಲಿ ಯುವ ಚೆಸ್ ಗ್ರ್ಯಾಂಡ್‌ಮಾಸ್ಟರ್‌ಗಳ ದಂಡೇ ಹೊರಹೊಮ್ಮಿದೆ. ಕರ್ನಾಟಕದಲ್ಲಿಯೂ ಅಂತಹದೊಂದು ಸುಗ್ಗಿ ಕಾಲ ತರುವ ಕನಸು ಈ ದಂಪತಿಯದ್ದು.

---

ಕ್ರೀಡೆಯ ರಾಯಭಾರಿಯೆಂಬ ಖ್ಯಾತಿಯ ನಿಖತ್ ಅವರಿಗೆ ಲಯಕ್ಕೆ ಮರಳಲು ಈ ವಿಶ್ವಕಪ್ ಕಾರಣವಾಯಿತು. 2024ರ ಪ್ಯಾರಿಸ್ ಒಲಿಂಪಿಕ್ ಕೂಟದ ನಂತರ ಅವರು ಗಾಯದ ಸಮಸ್ಯೆ ಎದುರಿಸಿದ್ದರು. ಚೇತರಿಸಿಕೊಂಡ ನಂತರ ಅರ್ಹತೆ ಗಳಿಸಿ ಆಡಿದ ವಿಶ್ವಮಟ್ಟದ ಟೂರ್ನಿಯಲ್ಲಿ ಫ್ಲೈವೇಟ್ ವಿಭಾಗದಲ್ಲಿ ಚಿನ್ನ ಜಯಿಸುವಲ್ಲಿ ಯಶಸ್ವಿಯಾದರು. 2022 ಮತ್ತು 2023ರಲ್ಲಿ ವಿಶ್ವ ಚಾಂಪಿಯನ್ ಆಗಿದ್ದರು. ಅಪ್ಪನ ಮಾರ್ಗದರ್ಶನದಲ್ಲಿ ಬೆಳೆದ ನಿಖತ್ ತೆಲಂಗಾಣದವರು.



**ನೂಪುರ್ ಬೆಳ್ಳಿ–ಚಿನ್ನ:** ನೂಪುರ್ ಶೆರಾನ್ 80 ಕೆ.ಜಿ. ಮೇಲಿನವರ ವಿಭಾಗದಲ್ಲಿ ಚಿನ್ನ ಜಯಿಸಿದರು. ಹೆವಿವೇಟ್ ಬಾಕ್ಸರ್ ನೂಪುರ್ ಅವರು ಉಜ್ಬೇಕಿಸ್ತಾನದ ಓಲ್ಟಿನೊಯ್ ಸೊಟಿಮ್‌ಬೊಯೆವಾ ಅವರನ್ನು 4–1 ರಿಂದ ಸೋಲಿಸಿದರು.



ಜೈಸ್ಮಿನ್ ಲ್ಯಾಂಬೊರಿಯಾ

‘ಕೆಲವು ದಿನಗಳ ಹಿಂದೆ ಲೀವರ್‌ಪೂಲ್‌ನಲ್ಲಿ ಫೈನಲ್‌ನಲ್ಲಿ ಸೋತಿದ್ದು ನನ್ನ ಮನದಲ್ಲಿತ್ತು. ನಿದ್ದೆ ಕೂಡ ಹತ್ತುತ್ತಿರಲಿಲ್ಲ. ಈಗ ಚಿನ್ನ ಗೆದ್ದಿರುವುದು ಮನಸ್ಸಿಗೆ ನೆಮ್ಮದಿ ತಂದಿದೆ. ಅಂದು ಗೆದ್ದಿದ್ದ ಬೆಳ್ಳಿ ಈಗ ಚಿನ್ನವಾಗಿದೆ’ ಎಂದು ತಮ್ಮ ಛಲದ ಸಾಧನೆಯನ್ನು ನೂಪುರ್ ವಿವರಿಸುತ್ತಾರೆ.

**ಜೈಸ್ಮಿನ್ ಛಲ:** ತನ್ನ ಇಬ್ಬರು ಚಿಕ್ಕಪ್ಪಂದಿರು ಬಾಕ್ಸಿಂಗ್‌ನಲ್ಲಿ ರಾಷ್ಟ್ರೀಯ ಪದಕಗಳನ್ನು ಗೆಲ್ಲುವುದನ್ನು ನೋಡಿದ್ದ ಜೈಸ್ಮಿನ್ ಕೂಡ ಬಾಲ್ಯದಲ್ಲಿಯೇ ರಿಂಗ್‌ಗೆ ಧುಮುಕಿದರು. ಹರಿಯಾಣದ ಜೈಸ್ಮಿನ್ ಅವರ ಅಜ್ಜ ಹವಾಸಿಂಗ್ ಅವರು ಬಾಕ್ಸಿಂಗ್ ದಂತಕಥೆಯಾಗಿದ್ದಾರೆ. ರಕ್ತಗತವಾಗಿ ಬಂದ ಕಲೆಗೆ ಚಿನ್ನದ ಫಸಲು ಬೆಳೆಯುತ್ತಿದ್ದಾರೆ.

**ಪರವೀನ್ ‘ವಿನ್’:** ಹರಿಯಾಣದ ಪರವೀನ್ ಹೂಡಾ ಅವರು 2022ರಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಜಯಿಸಿದ್ದರು. ಆಗಿನಿಂದಲೂ ಆ ಪದಕದ ಬಣ್ಣವನ್ನು ಚಿನ್ನದ ಹೊಳಪಿಗೆ ಪರಿವರ್ತಿಸುವ ಛಲ ಅವರ ಮನದಲ್ಲಿತ್ತು. ಏಕೆಂದರೆ ಅದೇ ವರ್ಷ ಅವರು ತಮ್ಮ ಚಲನವಲನದ ಕುರಿತು ರಾಷ್ಟ್ರೀಯ ಉದ್ದೀಪನ ಮದ್ದು ನಿಯಂತ್ರಣ ಮಂಡಳಿಗೆ (ನಾಡಾ) ಮಾಹಿತಿ ನೀಡುವ ನಿಯಮವನ್ನು ಉಲ್ಲಂಘಿಸಿದ್ದರು. ಆದ್ದರಿಂದ ಅವರನ್ನು ಅಮಾನತು ಮಾಡಿ, ಪದಕವನ್ನು ವಾಪಾಸ್ ಪಡೆಯಲಾಗಿತ್ತು. ನಂತರ ಮತ್ತೆ ರಿಂಗ್‌ಗೆ ಮರಳಿದ ಅವರು ಇದೀಗ ವಿಶ್ವಕಪ್ ಟೂರ್ನಿಯ 60 ಕೆ.ಜಿ. ವಿಭಾಗದಲ್ಲಿ ಚಿನ್ನ ಜಯಿಸಿದ್ದಾರೆ. ■